ಬೇಡವೆಂದರೂ, ಮಾನವೀಯತೆ ಎಲ್ಲ ಧರ್ಮಕ್ಕಿಂತ ದೊಡ್ಡದು ಅಲ್ಲವೇನಪ್ಪ ಎಂದ ರೋಹಿಣಿಯ ಮಾತೇ ಅವರ ಮಸ್ತಿಷ್ಕದಲ್ಲಿ ಪ್ರತಿಧ್ವನಿಸುತ್ತಿತ್ತು...

ಮರುದಿನ ಮುಂಜಾನೆ ಮಠಕ್ಕೆ ಹೊರಟು ನಿಂತಿದ್ದವನಲ್ಲಿ ಮತ್ತೆ ಕೇಳಿದಾಗ ಆತ ಹೇಳಿದ: 'ಕೇಳ್ದೆ ಅಪ್ಪ. ಅವರು ಒಂದೇ ಮಾತು ಹೇಳಿದರು ಅವನು ಮತಾಂತರಗೊಂಡು ನಮ್ಮ ಧರ್ಮಕ್ಕೆ ಸೇರುವನಾದರೆ, ಅವಕಾಶ ಇದೆ, ನೋಡುವ ಅಂತ.'

'ಅದು ಕಷ್ಟಾನಪ್ಪ. ರೋಹಿಣಿ ಹೇಳಿದ್ದಳು ಇಷ್ಟು ದಿನದವರೆಗೂ ನಮ್ಮ ಧರ್ಮ ಸೇರಿಕೋ ಅಂತ ಅವನು ಹೇಳಲಿಲ್ಲವಂತೆ. ಮನೆಯಲ್ಲಾದರೂ ಅವನ ನಮಾಜು ಅವನದು, ಇವಳ ಪೂಜೆ ಇವಳದಂತೆ. ಹೀಗಿರುವಾಗ ಈಕೆಯಾದರೂ ಯಾವ ಬಾಯಿಂದ ಮತಾಂತರಕ್ಕೆ ಕೇಳಿಯಾಳು ಹೇಳು. ಒಮ್ಮೆ ಹಾಗೆ ಕೇಳಿ ಅವನು ಸಿಟ್ಟುಗೊಂಡು ನಿನ್ನ ಬದುಕು ನಿನ್ನದು ನನ್ನ ಬದುಕು ನನ್ನದು ಅಂದುಬಿಟ್ಟರೆ ಹಾಳಾಗುವುದು ನಮ್ಮ ವಸ್ತುವೇ ಅಲ್ಲವೇನೊ.'

'ಹಾಗಿದ್ದರೆ ಇದು ಮುಗಿದ ಅಧ್ಯಾಯ ಅಂತ ತಿಳಿದುಕೊಳ್ಳಿ. ಅಲ್ಲ, ನೀವೇ ಸ್ವಲ್ಪ ಅರ್ಥ ಮಾಡಿಕೊಳ್ಳಿ ಅಪ್ಪ. ನಾನೀಗ ಮಠದ ಧರ್ಮಸಮಿತಿಯ ಮುಖ್ಯಸ್ಥ. ನಮ್ಮ ಹುಡುಗಿಯರು ಬೇರೆ ಧರ್ಮದವರೊಟ್ಟಿಗೆ ಓಡಿ ಹೋಗುವುದರಿಂದ, ನಮ್ಮಲ್ಲಿಯ ಗಂಡುಗಳಿಗೇ ಹೆಣ್ಣಿಲ್ಲ ಎಂದು ಎಲ್ಲಾ ಕಡೆ ಹೊಯ್ಕೋತಿದಾರೆ. ನಮ್ಮ ಧರ್ಮಸಮಿತಿ ಅದನ್ನ ತಪ್ಪಿಸುವ ಹೊಣೆ ವಹಿಸಿಕೊಂಡಿದೆ. ಮುಖ್ಯಸ್ಥನೇ ಹೀಗೆ ಮಾಡಿದ ಅಂತ ನಾಲ್ಕು ಜನ ಅನ್ನೋಲ್ಲವಾ? ಈಗಾಗಿರೋ ಗಾಯ ಸಾಲದು ಅಂತ ಮತ್ತೆ ಅದನ್ನೇ ಕೆರೆದುಕೊಳ್ಳೋದು ಸರಿಯಾ?'

'ನನಗೆಲ್ಲ ಅರ್ಥವಾಗುತ್ತದೆ ಕಾರ್ತಿ. ಇದುವರೆಗೆ ನಡೆದದ್ದೂ ಕೂಡ. ಗುರುಗಳು ನನಗೆ, ಒಬ್ಬ ಭಕ್ತನಿಗೆ ಮಾತಾಡುವ ಅವಕಾಶವನ್ನೇ ಕೊಡಲಿಲ್ಲ ಅಂದರೆ ನಂಬಬೇಕಾ? ಅದೂ ನನಗೆ ಸರಿ ಕಾಣುವುದಿಲ್ಲ. ಈ ಕುರಿತು ನಾನು ಹೀಗೆ ಯೋಚಿಸಿದ್ದೇನೆ. ರೋಹಿಣಿ ಬರಲು ಅವಕಾಶ ಮಾಡಿಕೊಡುವುದು. ಅದು ತಪ್ಪು ಅಂತ ಗುರುಗಳ ಭಾವನೆ ಇದ್ದರೆ ಅವರು ನನ್ನನ್ನೇ ಕರೆಸಿ ಕೇಳಬೇಕು ತಾನೆ? ಆಗ ಮಾತಾಡಿ ನಾಮಾಡಿದ್ದು ತಪ್ಪು ಅನ್ನುವುದಕ್ಕೆ ಅವರು ಸಮಜಾಯಿಷಿ ಕೊಟ್ಟರೆ ಮತ್ತೆ ಅವರು ಬರುವುದು ಬೇಡ ಅಂದರಾಯಿತು.'

'ಇದು ನಿಮ್ಮ ಅಂತಿಮ ತೀರ್ಮಾನವೋ?'

'ಹೌದು.'

ಕಾರ್ತೀಕ ತನ್ನದೇ ತೀರ್ಮಾನ ತೆಗೆದುಕೊಂಡವನಂತೆ ಎದ್ದು ನಡೆದ.

★★★

ಮತ್ತೆ ಒಂದೇ ವಾರದಲ್ಲಿ ಕಾರ್ತೀಕ ಬೇರೆ ಮನೆ ಮಾಡಿದ್ದ. ಭಟ್ಟರು ಬೇಡ ಎಂದು ಹೇಳಲಿಲ್ಲ. ಮಗಳಿಗೆ ಫೋನ್ ಮಾಡಿ ವಿಷಯ ತಿಳಿಸಿ, ನೀನು ಬೇಕೆಂದಾಗ ಬಂದು ಹೋಗಬಹುದಮ್ಮ ಎಂದಷ್ಟೆ ಹೇಳಿ ಫೋನು ಇರಿಸಿಬಿಟ್ಟರು. ಇದೀಗ ನಿಜವಾದ ಅವರ ನಿವೃತ್ತ ಜೀವನ ಆರಂಭವಾಗಿತ್ತು. ಮಗಳು ಬಂದಾಗ ಮೊಮ್ಮಗುವಿನೊಟ್ಟಿಗೆ ಆಡುವುದು, ಅವನ ಕೀಟಲೆಗಳಲ್ಲಿ ಮೈ ಮರೆಯುವುದು... ಇದೇ ಈ ವೃದ್ಧಾಪ್ಯದಲ್ಲಿ ಸುಖ ಕೊಡುವ ಬದುಕು ಎಂದವರಿಗೆ ಅನ್ನಿಸಿಬಿಟ್ಟಿತ್ತು. ಹೇಗೋ ಇರುವಷ್ಟು ಕಾಲ ಯಾವ ಗೋಜು ಗೊಂದಲವೂ ಇಲ್ಲದೆ ನೆಮ್ಮದಿಯಾಗಿ ಕಾಲ ಕಳೆದರಾಯಿತು ಎಂದು ಪದೇ ಪದೇ ರುಕ್ಮಿಣಿಗೆ ಹೇಳುವುದಿತ್ತು. ಕಾರ್ತೀಕ ಗುರುಗಳ ಸನ್ನಿಧಿಯಲ್ಲಿಯೆ ಒಂದು ನಾಗಪ್ರತಿಷ್ಠೆ ಮಾಡಿಸಿದನಂತೆ ಸಂತಾನಕ್ಕಾಗಿ ಎಂದು ಅವರಿವರಿಂದ ಕೇಳಲ್ಪಟ್ಟಾಗ ತಮ್ಮನ್ನ ಸೌಜನ್ಯಕ್ಕೂ ಕರೆಯಲಿಲ್ಲವಲ್ಲ ಎನ್ನುವ ನೋವು ಬಾಧಿಸಿತಾದರೂ ಒಂದನ್ನ ಪಡೆಯಬೇಕಾದರೆ ಒಂದನ್ನ ಕಳೆದುಕೊಳ್ಳುವುದೇ ಬದುಕೇನೋ ಅಂದುಕೊಂಡು ಸುಮ್ಮನಾದರು. ಈ ಸಂದರ್ಭದಲ್ಲಿಯೆ ಅವರ ಕಾಲು ಉಳುಕಿದ್ದು.